## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 107 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 04.03.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಣ್ಣು ಮತ್ತು ಕಲ್ಲುಗಣಿಗಾರಿಕೆ ನಡೆಸಲು ಎಷ್ಟು ಅನುಮತಿ ನೀಡಲಾಗಿದೆ; ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಈ ಕುರಿತು ಮಾಹಿತಿ ನೀಡಲಾಗಿದೆಯೇ; | ➢ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಪ್ರಸ್ತುತ, ಕಲ್ಲು ಗಣಿಗಾರಿಕೆ (ಅಲಂಕಾರಿಕ ಶಿಲೆ/ ಕಟ್ಟಡ ಕಲ್ಲು/ ಕೆಂಪು ಕಲ್ಲು) ನಡೆಸಲು 141 ಗುತ್ತಿಗೆಗಳನ್ನು 327ಎಕರೆ-33ಗುಂಟೆ ಪ್ರದೇಶದಲ್ಲಿ ಹಾಗೂ ಮಣ್ಣು (ಮುರ್ರಂ) / ಕೆಂಪು ಕಲ್ಲು/ ಕಟ್ಟಡ ಕಲ್ಲು ತೆಗೆಯಲು 17 ಕಾರ್ಯಾನುಮತಿಗಳನ್ನು 17-36 ಎಕರೆ ಪ್ರದೇಶದಲ್ಲಿ ನೀಡಲಾಗಿರುತ್ತದೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಂತೆ ಕಲ್ಲು ಗಣಿಗಾರಿಕೆಗೆ ಮಂಜೂರಾತಿ ಪೂರ್ವದಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣೆ ಪತ್ರಗಳು ಹಾಗೂ ಸಂಬಂಧಪಟ್ಟ ಭೂವಿಜ್ಞಾನಿಯವರಿಂದ ತಾಂತ್ರಿಕ ವರದಿಗಳನ್ನು ಪಡೆಯಬೇಕಾಗಿರುತ್ತದೆ.<br>➢ ನಿಯಮ-3-A(a) ಮತ್ತು 3-A(b) ರಂತೆ ಮುರ್ರಂ ಉಪಖನಿಜವನ್ನು ತೆಗೆಯಲು ಕಾರ್ಯಾನುಮತಿ ನೀಡುವ ಸಂದರ್ಭದಲ್ಲಿ ಸಂಬಂಧಪಟ್ಟ ಕೃಷಿ ಅಧಿಕಾರಿಗಳಿಂದ ದೃಢೀಕರಣ ಪತ್ರ ಪಡೆಯಲು ನಿಯಮಗಳಲ್ಲಿ ಅವಕಾಶವಿರುತ್ತದೆ.<br>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರನ್ವಯ ಮಣ್ಣು ಮತ್ತು ಕಲ್ಲು ಗಣಿಗಾರಿಕೆ ನಡೆಸಲು ಸ್ಥಳೀಯ ಸಂಸ್ಥೆಗಳಿಂದ ನಿರಾಕ್ಷೇಪಣಾ ಪತ್ರ ಪಡೆಯಲು ಹಾಗೂ ಗುತ್ತಿಗೆ / ಕಾರ್ಯಾದೇಶ ಮಂಜೂರು ಮಾಡಿರುವ ಮಾಹಿತಿಯನ್ನು ಸದರಿ ಸಂಸ್ಥೆಗಳಿಗೆ ಸಲ್ಲಿಸಲು ನಿಯಮಗಳಲ್ಲಿ ಉಲ್ಲೇಖವಿರುವುದಿಲ್ಲ. |
| ಆ) | ಪ್ರತಿ ವರ್ಷ ಗಣಿಗಾರಿಕೆ ಯಿಂದ ಸಂಗ್ರಹವಾಗುವ ರಾಜಧನದ ವಿವರವನ್ನು ಸಂಬಂಧಪಟ್ಟ ಸ್ಥಳೀಯ | ➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 36 ರಂತೆ ಕಲ್ಲು ಮತ್ತು ಮಣ್ಣಿನ ಗಣಿಗಾರಿಕೆಯಿಂದ ಸಂಗ್ರಹವಾದ ರಾಜಧನ ಮೊತ್ತವನ್ನು ರಾಜ್ಯ ಸಂಚಿತ ನಿಧಿಗೆ ಜಮೆ ಮಾಡಲಾಗುವುದು. |

. . . 2

<table>
<tr><td></td><td>-ಸಂಸ್ಥೆಗಳಿಗೆ ವಾರ್ಷಿಕವಾಗಿ ಕಳುಹಿಸಿಕೊಡಲಾಗುತ್ತಿದೆಯೇ;</td><td>➢ ಕಲ್ಲು ಮತ್ತು ಮಣ್ಣಿನ ಗಣಿಗಾರಿಕೆಯಿಂದ ರಾಜಧನ ಸಂಗ್ರಹ ವಿವರಗಳ ಮಾಹಿತಿಯನ್ನು ಸ್ಥಳೀಯ ಸಂಸ್ಥೆಗಳಿಗೆ ಸಲ್ಲಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.</td></tr>
<tr><td>ಇ)</td><td>ಪ್ರತಿ ವರ್ಷ ಗಣಿಗಾರಿಕೆಯಿಂದ ಸಂಗ್ರಹವಾದ ರಾಜಧನದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ನಿಯಮಾನುಸಾರ ನೀಡಬೇಕಾದ ಪಾಲು ಎಷ್ಟು; ಎಷ್ಟು ಸ್ಥಳೀಯ ಸಂಸ್ಥೆಗಳಿಗೆ ನೀಡಿದೆ; ಇನ್ನು ನೀಡಬೇಕಾದ ಪಾಲು ಎಷ್ಟು; ಇದನ್ನು ಯಾವಾಗ ನೀಡಲಾಗುವುದು;</td><td>➢ ಕಲ್ಲು ಮತ್ತು ಮಣ್ಣಿನ ಗಣಿಗಾರಿಕೆಯಿಂದ ಸಂಗ್ರಹವಾದ ರಾಜಧನ ಮೊತ್ತವನ್ನು ರಾಜ್ಯ ಸಂಚಿತ ನಿಧಿಗೆ ಜಮೆ ಮಾಡಲಾಗುತ್ತದೆ. ಕಲ್ಲು ಮತ್ತು ಮಣ್ಣಿನ ಗಣಿಗಾರಿಕೆಯಿಂದ ಸ್ವೀಕೃತವಾದ ರಾಜಧನ ಮೊತ್ತವನ್ನು ರಾಜ್ಯ ಸಂಚಿತ ನಿಧಿ (State Consolidated Fund) ಗೆ ಜಮೆ ಮಾಡಲಾಗುತ್ತದೆ.<br>➢ ರಾಜ್ಯ ಸಂಚಿತ ನಿಧಿಯಿಂದ ಆಯ-ವ್ಯಯದ ಮೂಲಕ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರದಿಂದ ಹಣವನ್ನು ಬಿಡುಗಡೆಗೊಳಿಸಲಾಗುತ್ತದೆ.</td></tr>
<tr><td>ಈ)</td><td>ಒಂದು ಗ್ರಾಮ ಪಂಚಾಯಿತಿಯಲ್ಲಿ ಅಥವಾ ಪಕ್ಕದ ರಾಜ್ಯದಲ್ಲಿ ಗಣಿಗಾರಿಕೆ ಮಾಡಿ ಅದನ್ನು ಇತರೆ ಭಾಗದ ರಸ್ತೆಗಳಲ್ಲಿ ಸಾಗಿಸುವಾಗ ಹಾನಿಗೊಳಗಾದ ರಸ್ತೆಗಳ ದುರಸ್ಥಿ ಹಾಗೂ ನಿರ್ವಹಣೆ ಹೊಣೆಗಾರಿಕೆ ಯಾರದ್ದು; ಸದರಿ ರಸ್ತೆಗಳನ್ನು ದುರಸ್ಥಿ ಮಾಡಲಾಗುತ್ತಿದೆಯೇ; (ತಾಲ್ಲೂಕುವಾರು ವಿವರ ನೀಡುವುದು)</td><td>ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಗಣಿಗಾರಿಕೆಯಿಂದ ಸಂಗ್ರಹವಾಗುವ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಧಿಯಿಂದ ಅನುದಾನವನ್ನು ಮೀಸಲಿಟ್ಟು ಗಣಿ ಬಾಧಿತ ಪ್ರದೇಶಗಳ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.<br>ವಿವರಗಳನ್ನು ಅನುಬಂಧ-01 ರಲ್ಲಿ ನೀಡಲಾಗಿದೆ.
<table>
<tr><th>ಕ್ರ. ಸಂ.</th><th>ತಾಲ್ಲೂಕು</th><th>ಕಾಮಗಾರಿಗಳ ಸಂಖ್ಯೆ</th><th>ವೆಚ್ಚ (₹ಲಕ್ಷಗಳಲ್ಲಿ)</th></tr>
<tr><td>1</td><td>ಬಂಟ್ವಾಳ</td><td>14</td><td>57.50</td></tr>
<tr><td>2</td><td>ಬೆಳ್ತಂಗಡಿ</td><td>3</td><td>14.00</td></tr>
<tr><td>3</td><td>ಮಂಗಳೂರು</td><td>3</td><td>12.00</td></tr>
<tr><td>4</td><td>ಸುಳ್ಯ</td><td>1</td><td>2.50</td></tr>
<tr><td>5</td><td>ಮೂಡಬಿದ್ರೆ</td><td>8</td><td>32.50</td></tr>
<tr><td colspan="2">ಒಟ್ಟು</td><td>29</td><td>118.50</td></tr>
</table>
</td></tr>
<tr><td>ಉ)</td><td>ಈಗಾಗಲೇ ಸರಕಾರಿ, ಖಾಸಗಿ ಜಾಗಗಳಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಪರವಾನಿಗೆಯೊಂದಿಗೆ ಮತ್ತು</td><td>➢ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ಕಲ್ಲುಗಣಿ ಗುತ್ತಿಗೆ ಕರಾರು (ನಮೂನೆ-E) ರ ಭಾಗ-VII ರಲ್ಲಿನ ಷರತ್ತು ನಿಬಂಧನೆಗಳಂತೆ ಕಲ್ಲುಗಣಿ ಗುತ್ತಿಗೆದಾರರು ಸುರಕ್ಷತೆಗಾಗಿ ಬೇಲಿ/ ಗೋಡೆ ನಿರ್ಮಿಸುವುದು, ಸುರಕ್ಷತೆ ಕಾಪಾಡುವ-</td></tr>
</table>

...3

| | | |
|---|---|---|
| | ಅನಧಿಕೃತವಾಗಿ ಗಣಿಗಾರಿಕೆ ಮಾಡಿ ಬೃಹತ್ ಗಾತ್ರದ ಪ್ರಪಾತಗಳು ನಿರ್ಮಾಣವಾಗಿದ್ದು ಅದನ್ನು ಸಮತಟ್ಟು ಮಾಡುವ ಜವಾಬ್ದಾರಿ ಯಾರಿಗೆ ಸಂಬಂಧಿಸಿದೆ; ಮತ್ತು ಅದನ್ನು ಪ್ರಸ್ತುತ ಮೇಲ್ವಿಚಾರಣೆ ಯಾರು ಮಾಡುತ್ತಿದ್ದಾರೆ; ಇನ್ನೂ ಇರುವ ಪ್ರಪಾತಗಳನ್ನು ಸಮತಟ್ಟು ಮಾಡಲು ಯಾವ ಕ್ರಮವಹಿಸಿದೆ? (ವಿವರ ನೀಡುವುದು) | -ಷರತ್ತಿಗೆ ಒಳಪಟ್ಟಿದ್ದು, ಚಾಲ್ತಿ ಕಲ್ಲುಗಣಿ ಗುತ್ತಿಗೆದಾರರಿಂದ ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಸುರಕ್ಷತೆಗಾಗಿ ತಂತಿಬೇಲಿ ನಿರ್ಮಿಸಿ, ಕ್ರಮ ಕೈಗೊಳ್ಳಲಾಗಿರುತ್ತದೆ.<br>➢ ಪ್ರಸ್ತುತ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಗಣಿಗಾರಿಕೆ ನಿರ್ವಹಿಸಲು ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಕಡ್ಡಾಯಗೊಳಿಸಿದ್ದು, ಅನುಮೋದಿತ ಮೈನ್ ಕ್ಲೋಷರ್ ಪ್ಲಾನ್(Mine Closure Plan) ನಂತೆ ಗುತ್ತಿಗೆ/ಲೈಸೆನ್ಸ್ ದಾರನು ಗಣಿಗಾರಿಕೆಯಿಂದ ಉಂಟಾದ ಗುಂಡಿಗಳನ್ನು ಪುನಶ್ಚೇತನಗೊಳಿಸಬೇಕಾಗಿರುತ್ತದೆ.<br>➢ ಹಲವಾರು ವರ್ಷಗಳಿಂದ ಗಣಿಗಾರಿಕೆ ನಡೆದು ಅಪಾಯಕಾರಿಯಾಗಿರುವ ಪರಿತ್ಯಕ್ತ ಕ್ವಾರಿ ಗುಂಡಿಗಳ ಸುತ್ತಲೂ ಸುರಕ್ಷತೆಗಾಗಿ ತಡೆಗೋಡೆ ನಿರ್ಮಿಸಲುಆಯವ್ಯಯದಲ್ಲಿ ಸರ್ಕಾರದಿಂದಅನುದಾನವನ್ನು ಬಿಡುಗಡೆಗೊಳಿಸಲಾಗುತ್ತಿದೆ.<br>➢ ಸದರಿ ಮೊತ್ತವನ್ನು ಬಳಸಿಕೊಂಡು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಪರಿತ್ಯಕ್ತ ಕ್ವಾರಿ ಗುಂಡಿಗಳ ಸುತ್ತಲೂ ತಡೆಗೋಡೆ ನಿರ್ಮಿಸಲಾಗುತ್ತಿದೆ. |

ಸಂಖ್ಯೆ ಸಿಐ -ಎಂಎಂಎನ್/60/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಧಿಯಿಂದ ಗಣಿ ಬಾಧಿತ ಪ್ರದೇಶಗಳ ರಸ್ತೆ ಅಭಿವೃದ್ಧಿ ಕಾರ್ಯ ಕೈಗೊಂಡಿರುವ ಕಾಮಗಾರಿಗಳ ವಿವರ

| Sl.No | District | Taluk | Grama Panchayat | village | project name | amount sanctioned (in lakhs) |
|---|---|---|---|---|---|---|
| 1 | Dakshina Kannada | Bantwala | Kadeshivalaya | Kadeshivalaya | Road Repair Gujiruku to Tharigudi | 5.00 |
| 2 | | | Thumbe | Thumbe | Berva Road of Thumbe village | 5.00 |
| 3 | | | Amtady | Amtady | Nalkemar Road, | 3.00 |
| 4 | | | Thumbe | Thumbe | Road Development : Paraneeru of Thumbe village | 4.00 |
| 5 | | | Kadeshivalaya | Kadeshivalaya | Muchila to Nejinadka Road Repair | 3.00 |
| 6 | | | Thumbe | Thumbe | Maji Road of Thumbe village | 5.00 |
| 7 | | | Ananthady | Ananthady | Road Repair Work from Babankatte road to Kombilakatte | 5.00 |
| 8 | | | Kariyangala | Kariyangala | Road Repair Work from Kariyangala to Punchame- | 5.00 |
| 9 | | | Veerakamba | Veerakamba | Road Development from Bayla to Deremaaru in Veera Kamba Village | 5.00 |
| 10 | | | Thumbe | Thumbe | Road Development :- Nethravathi Road of Thumbe village | 4.00 |
| 11 | | | Vitla Town Panchayath | Vitla Town Panchayath | Road Development from Ukkuda Road to Branapade | 3.00 |
| 12 | | | Amtady | Amtady | Nodaje Road | 3.00 |
| 13 | | | Thumbe | Thumbe | Mallikodi Road of Thumbe village | 4.00 |
| 14 | | | Amtady | Amtady | Road Development in Kukkuri To Papudadka-Kuriyala Village, | 3.50 |
| 15 | | Moodabidre | Kallamundkuru | Niddodi | Road Development: Bangerapadavu-Kolatharu-Manjanabailu | 5.00 |
| 16 | | | Niddodi | Niddodi | Road Development:- Bangerapadavu Near Govt Well | 2.50 |
| 17 | | | Iruvailu | Iruvailu | Road Development:- Gurimajalu Road -Iruvailu Village | 5.00 |
| 18 | | | Niddodi | Niddodi | Road Development:-Palkehithu | 2.50 |
| 19 | | | Puthige | Puthige | Road Development from Puthige to Kukkudaguri Road, | 5.00 |
| 20 | | | Paladka | Kadandale | Paladka Village Gundyadka Kallasanka Road | 2.50 |

| | | | | | | |
|---|---|---|---|---|---|---|
| 21 | | | Edapadavu | Edapadavu | Road Repair Work from Ashwatha Pura-Kondebettu-Pidamale-Manjanabailu. | 5.00 |
| 22 | | | Kallamundkuru | Kallamundkuru | Poyyodi Road of Kallamundkuru village | 5.00 |
| 23 | | Mangalore | Kulavoor | Kulavoor | Road Repair Work from Kulavuru-Dhumavathi Dhaivasthana Road | 2.00 |
| 24 | | | Kolambe | Kolambe | Road Development & Street Light from Kaudur Katte PWD Road to Kaudur Site- | 5.00 |
| 25 | | | Adyar | Adyar | Road Repair Work:- Adyar Padavu | 5.00 |
| 26 | | Belthangady | Thannirupantha | Thannirupantha | Road Development: Karaya Janatha Colony of Thannirupantha village | 5.00 |
| 27 | | | Thannirupantha | Thannirupantha | Road Development: Kalleri Janatha Colony, of Thannirupantha village | 4.00 |
| 28 | | | Ilanthila | Ilanthila | Road Development :Gandibagilu-Nayimaaru | 5.00 |
| 29 | | Sullia | Markanja | Markanja | Development of Road at Goliyadka -Pura -Miranguru in Markanja G.P | 2.50 |
| **Total** | | | | | | **118.50** |

CI-60-MMN-2025

Deputy Director (Min. Admn)
Dept. of Mines & Geology
Bangalore-560001